'ಇವು ಅದೇ ಆಸ್ಪತ್ರೆಯ ಡಾಕ್ಟರ್.. ರಾಯರ ಸಂಬಂಧಿಕರು..' ಎಂದು ಆದರ್ಶನನ್ನು ಪರಿಚಯಿಸಿದಳು. 'ಇಲ್ಲಿಂದ ಹೋದವ್ನು ಮನೇಗೂ ಬಂದಿಲ್ಲ, ಅಂದ್ರೆ ಆತ ಎಲ್ಲಿಗೆ ಹೋದ?'

'ಅವ್ನನ್ನು ಹೇಗಾದ್ರೂ ಹುಡುಕಿ ರಾಯರ ಮುಂದೆ ಕರ್ಕೊಂಡು ಹೋಗ್ಬೇಕಿತ್ತು. ದಯವಿಟ್ಟು ಸಹಾಯ ಮಾಡಿ ಸಾರ್.. ಅವ್ನನ್ನು ಹುಡುಕಿ ಕೊಡಿ ಸಾರ್..' ಅಪೂರ್ವ ಭಿನ್ನವಿಸಿಕೊಂಡಾಗ, ಇದನ್ನೆಲ್ಲಾ ನಿಂತು ನೋಡುತ್ತಿದ್ದ ಆದರ್ಶ ಅವಳನ್ನು ಮನದಲ್ಲೇ ಮುಚ್ಚಿಕೊಂಡ.

'ಸೂರ್ಯ ಎಲ್ಲೀಂತ ಆ ರೌಡಿ ಗೋಪಿಗೆ ಗೊತ್ತಿರಬೇಕು.. ಅವ್ನು ನಮ್ಮ ಬಲೆಗೆ ಬಿದ್ದಿದಾನೆ.. ಅವ್ನ ಚಾರ್ಜ್‌ಶೀಟ್ ತಯಾರು ಮಾಡಿ ಕೋರ್ಟ್‌ಗೆ ಪ್ರೊಡ್ಯೂಸ್ ಮಾಡೋ ತಯಾರಿ ಮಾಡ್ತಿದ್ದೆ..' ಎಂದ.

ಆ ಇನ್ಸ್‌ಪೆಕ್ಟರ್ ಸೆಲ್‌ನ ಬಾಗಿಲ ಬಳಿ ನಿಂತು ಗೋಪಿಯನ್ನುದ್ದೇಶಿಸಿ, 'ಆ ಸೂರ್ಯ ಎಲ್ಲೋ ಸಿಗ್ತಾನೆ..?' ಎಂದು ಗತ್ತಿನಿಂದಲೇ ಪ್ರಶ್ನಿಸಿದರು. ಹೊರಗೆ ಮೇಜಿನ ಮುಂದಿನ ಕುರ್ಚಿಯಲ್ಲಿ ಕುಳಿತಿದ್ದ ಅವರಿಬ್ಬರಿಗೂ ಇನ್ಸ್‌ಪೆಕ್ಟರ್‌ನ ಬೆನ್ನು ಕಾಣುತ್ತಿತ್ತೇ ವಿನಹ ಸೆಲ್ ಒಳಗಿನ ವ್ಯಕ್ತಿ ಕಾಡುತ್ತಿರಲಿಲ್ಲ. ಇನ್ಸ್‌ಪೆಕ್ಟರ್‌ನ ಬೆದರಿಕೆಗೆ ಗೋಪಿ ಬಾಯ್ಬಿಟ್ಟ.

'ಅವ್ನ ಹತ್ರ ಮೊಬೈಲ್ ಇದ್ಯಾ? ಫೋನ್ ಮಾಡು ಅವ್ನಿಗೆ..' ಇನ್ಸ್‌ಪೆಕ್ಟರ್ ತಮ್ಮ ವಶದಲ್ಲಿದ್ದ ಗೋಪಿಯ ಮೊಬೈಲನ್ನು ಅವನ ಕೈಗೆ ಕೊಟ್ಟು ಸೂರ್ಯನ ನಂಬರಿಗೆ ಕರೆ ಮಾಡಿಸಿದರು. ಸೂರ್ಯ ಕರೆ ಸ್ವೀಕರಿಸಿ ಮಾತನಾಡಿದಾಗ, ಗೋಪಿ ಉಪಾಯವಾಗಿ ಅವನಿದ್ದ ಜಾಗ ವಿಚಾರಿಸಿದ್ದ.

'ನನ್ನನ್ನು ಸ್ಟೇಶನ್ನಿಂದ ಬಿಟ್ಟಿದ್ದಾರೆ.. ನಾನು ಕಳ್ಳತನ ಮಾಡಿಲ್ಲಾಂತ ಗೊತ್ತಾಯ್ತು.. ನೀನೆಲ್ಲಿದ್ದೀ ಹೇಳು.. ನಾನು ಬರ್ತೀನಿ..' ಸೂರ್ಯ ತಾನಿದ್ದ ಜಾಗ ತಿಳಿಸಿದಾಗ ಇನ್ಸ್‌ಪೆಕ್ಟರ್ ಮುಖದಲ್ಲಿ ಗೆಲುವು ಮೂಡಿತು.

'ಅರ್ಧ ಗಂಟೇಲಿ ನಾನು ಬರ್ತೀನಿ ಗುರೂ..' ಗೋಪಿ ನುಡಿದು ತನ್ನ ಮೊಬೈಲನ್ನು ಇನ್ಸ್‌ಪೆಕ್ಟರ್‌ಗೆ ಹಿಂದಿರುಗಿಸಿದ.

'ನಾನು ನಿಮ್ಜೊತೆ ಬರ್ತೀನಿ ನಡೀರಿ...' ಇನ್ಸ್‌ಪೆಕ್ಟರ್ ಹುರುಪಿನಿಂದ ನುಡಿದಾಗ ಇಲ್ಲವೆನ್ನಲಾಗದೇ ಅವರನ್ನು ಹಿಂಬಾಲಿಸಿದರು. ಪೋಲೀಸ್ ಜೀಪನ್ನು ಆದರ್ಶನ ಕಾರು ಹಿಂಬಾಲಿಸಿತು. ಹತ್ತು ಕಿ.ಮೀ ದೂರ ಕ್ರಮಿಸಿದ ಬಳಿಕ ಯಾವುದೋ ದೇವಿ ಗುಡಿಯ ಹಿಂದಿದ್ದ ಸಣ್ಣ ವಠಾರದ ಮುಂದೆ ವಾಹನ ನಿಲ್ಲಿಸಿದರು. ಅಲ್ಲಿಂದ ಒಳಗೆ ದ್ವಿಚಕ್ರ ವಾಹನ ಮಾತ್ರ ಹೋಗಬಹುದಾದ ಇಕ್ಕಟ್ಟಾದ ರಸ್ತೆ. ಇನ್ಸ್‌ಪೆಕ್ಟರ್ ಮುನ್ನಡೆದಾಗ ಇವರಿಬ್ಬರೂ ಅಳುಕುತ್ತ ಹಿಂಬಾಲಿಸಿದರು. ಕಡೆಗೆ ಹಸಿರು ಬಣ್ಣದ ಗೋಡೆಯಿದ್ದ ಮನೆಯ ಮುಂದೆ ನಿಂತು ಬಾಗಿಲು ಬಡಿದಾಗ, ಬಾಗಿಲು ತೆರೆದಿದ್ದು ಸೂರ್ಯ. ಇವರ ಮುಖ ಕಾಣುತ್ತಲೇ ಅವನ ಮುಖ ವಿವರ್ಣವಾಯಿತು. ಅಲ್ಲಿಂದ ತಪ್ಪಿಸಿ ಓಡಲು ಹವಣಿಸಿದವನಿಗೆ ಇನ್ಸ್‌ಪೆಕ್ಟರ್ ಅವಕಾಶವೇ ಕೊಡದಂತೆ ಅಡ್ಡ ನಿಂತಿದ್ದರು.

'ನಿನ್ನ ತಂದೆಗೆ ಎದೆ ನೋವು ಬಂದು ಆಸ್ಪತ್ರೇಲ್ಲಿದ್ದಾರಂತೆ..ನೀನು ನೋಡಿದ್ರೆ ಸ್ಟೇಶನ್ನಿಂದ ಮನೇಗೆ ವಾಪಸು ಹೋಗಿಲ್ವಂತೆ...ನಿನ್ತಂದೆ ನಿನ್ನನ್ನು ನೋಡಲು ಹಂಬಲಿಸ್ತೀದ್ದಾರಂತೆ..ಯಾಕೋ ಸೂರ್ಯ ಹೀಗೆ ಮಾಡ್ತೀಯಾ ?' ಇನ್ಸ್‌ಪೆಕ್ಟರ್‌ರ ಮೃದು ದನಿಗೆ ಆತನ ಆತಂಕ ಶಮನವಾಗಿತ್ತು. ಮನೆಯ ಹಣ ಹಿಡಿದು ಬಂದದ್ದಕ್ಕೆ ಅಪೂರ್ವ ಇನ್ಸ್‌ಪೆಕ್ಟರ್ ಅನ್ನು ಹಿಡಿದು ಬಂದಿದ್ದಾಳೆಂದು ಭಾವಿಸಿದವನಿಗೆ ತುಸು ನಿರಾಳವಾಯಿತು.

'ಅಷ್ಟೊಳ್ಳೇ ತಂದೆ ತಾಯಿಗೆ ಹುಟ್ಟಿದವನು ನೀನು.. ಯಾಕೆ ಇಂಥವರ ಜೊತೆ ಸೇರಿ ಹೀಗೆ ಹಾಳಾಗ್ತೀರೋ ಒಳ್ಳೇದಾಗಿ ಬದುಕುವ ಮಾರ್ಗ ನೋಡು.. ಅದು ಬಿಟ್ಟು ಹೀಗೆ ಎಲ್ಲೆಲ್ಲೋ ಇದ್ದು ಹಾಳಾಗಬೇಡ..' ಆತ ಒಳ್ಳೇ ಮನಸ್ಸಿನಿಂದ ಬುದ್ಧಿ ಹೇಳಿದರು. ಸೂರ್ಯ ನಿಂತಲ್ಲೇ ಚಡಪಡಿಸುತ್ತಿದ್ದ.

'ಇನ್ನೂ ಏನು ಆಲೋಚನೆ ಮಾಡಿ ನಿಂತಿದ್ದೀಯಾ..? ನಿನ್ನ ತಂದೇನ ನೋಡ್ಬೇಕು ಅಂತ ಅನ್ಸಲ್ವಾ..? ಹೊರಡು.. ಇವ್ರು ನಿನ್ನ ಕರ್ಕೊಂಡು ಹೋಗಲು ಬಂದಿದ್ದಾರೆ... ಅವ್ರ ಜೊತೆ ಹೋಗು..' ಸೂರ್ಯನಿಗೆ ಆತನ ಮಾತನ್ನು ನಿರಾಕರಿಸಲು ಆಗಲಿಲ್ಲ.

'ಮನೆಯಿಂದ ಬರುವಾಗ ತಂದಿದ್ದ ವಸ್ತುವನ್ನು ಜೊತೆಗೆ ತಗೊಂಡ್ಬನ್ನಿ..' ಅಪೂರ್ವ ಒತ್ತಿ ನುಡಿದಾಗ, ಆಕೆ ತಾನು ಒಯ್ದ ಹಣದ ಕುರಿತು ಹೇಳುತ್ತಿದ್ದಾಳೆಂದು ಸೂರ್ಯನಿಗೆ ಅರಿವಾಯಿತು. ಅವ್ರುಡುಗಚ್ಚಿ ಅವಳನ್ನು ಸುಟ್ಟು ಬಿಡುವಂತೆ ನೋಡಿದ. ಒಳ ಹೋಗಿ ಒಂದು ಕೈ ಚೀಲ ಹಿಡಿದು ಹೊರ ಬಂದ. ಅಪೂರ್ವ, ಆದರ್ಶ ಹಿಂದೆ ಸರಿದು ನಿಂತಾಗ ಇನ್ಸ್‌ಪೆಕ್ಟರ್‌ನ ಜೊತೆ ಸೂರ್ಯ ಹೆಜ್ಜೆ ಹಾಕಲೇ ಬೇಕಾಯಿತು. ಮುಖ್ಯ ರಸ್ತೆಗೆ ಬಂದೊಡನೆ ಆದರ್ಶ ಮುಂದೆ ಹೋಗಿ ಕಾರಿನಲ್ಲಿ ಕುಳಿತು ಮುಂಬಾಗಿಲು ತೆರೆದು ಸೂರ್ಯನನ್ನು ಆಹ್ವಾನಿಸಿದ. ಇನ್ಸ್‌ಪೆಕ್ಟರ್ ಎದುರು ಎದುರಾಡಲಾಗದೇ ಇಷ್ಟವಿಲ್ಲದೇ ಹೋದರೂ ಸೂರ್ಯ ಕುಳಿತುಕೊಳ್ಳಲೇ ಬೇಕಾಯಿತು. ಅಪೂರ್ವ ಇನ್ಸ್‌ಪೆಕ್ಟರ್‌ಗೆ ಕೃತಜ್ಞತೆ ಸಲ್ಲಿಸಿ ಆದರ್ಶನ ಕಾರೇರಿದಳು.

ಕಾರು ಸ್ವಲ್ಪ ಮುಂದೆ ಕ್ರಮಿಸಿದೊಡನೆ ಸೂರ್ಯ ಅರಚಿದ, 'ಕಾರು ನಿಲ್ಲಿಸಿ.. ನಾನು ನಿಮ್ಜೊತೆ ಎಲ್ಲೂ ಬರೋದಿಲ್ಲ....ನನ್ನನ್ನು ಬಿಟ್ಟು ಬಿಡಿ..' ಇನ್ಸ್‌ಪೆಕ್ಟರ್ ತಮ್ಮ ಸಂಗಡ ಸೂರ್ಯನಿದ್ದ ಸ್ಥಳಕ್ಕೆ ಬಾರದಿದ್ದರೆ, ಸೂರ್ಯನನ್ನು ಕರೆ ತರಲು ತಮ್ಮಿಂದ ಸಾಧ್ಯವಾಗುತ್ತಿರಲಿಲ್ಲ ಎಂದು ಇಬ್ಬರಿಗೂ ತಿಳಿದಿತ್ತು.

'ಸೂರ್ಯ.. ಕಿರುಚಾಡಬೇಡಿ..! ನೀವೀಗ ನಮ್ಜೊತೆ ಮನೇಗೆ ಬರಬೇಕು..' ಅಪೂರ್ವ ಮಾತು ಪೂರ್ಣಗೊಳಿಸುವ ಮುನ್ನವೇ, ಮುಂದಿನ ಸೀಟಿನಲ್ಲಿದ್ದ ಸೂರ್ಯ ಅಸಮಾಧಾನದಿಂದ ಕುದಿಯುತ್ತ ಹಿಂತಿರುಗಿ ಅಪೂರ್ವಳತ್ತ ಬಾಗಿ ಅವಳ ಕುತ್ತಿಗೆ ಒತ್ತಿ ಹಿಡಿಯುತ್ತಾ, 'ಇದೆಲ್ಲ ನಿನ್ನಿಂದಲೇ ಆಗಿರೋದು.. ಯಾರು ನೀನು? ನಿನಗ್ಯಾಕೆ ಈ ಅಧಿಕ ಪ್ರಸಂಗಿತನ..?' ಅವನ ಹಿಡಿತ ಬಿಗಿಯಾಗುತ್ತಿದ್ದಂತೇ ಅಪೂರ್ವ ತಲ್ಲಣಿಸಿದಳು.

ಆದರ್ಶ ಭಯಗ್ರಸ್ತನಾಗಿ ಕಾರನ್ನು ಬದಿಗೆ ನಿಲ್ಲಿಸುತ್ತ, ಸೂರ್ಯನ ಕೈಗಳನ್ನು ಹಿಂದೆಳೆಯುತ್ತ ಅಪೂರ್ವಳನ್ನು ಅವನ ಹಿಡಿತದಿಂದ ಬಿಡುಗಡೆಗೊಳಿಸಿದ.

'ಸೂರ್ಯ ಯಾಕೆ ಹೀಗೆ ವರ್ತಿಸುತ್ತಿದ್ದೀಯಾ ..? ಹೆಣ್ಣಿನ ಮೇಲೆ ಕೈ ಮಾಡಲು ನಾಚ್ಕೆಯಾಗಲ್ವಾ ನಿನ್ಗೆ..? ಮೊನ್ನೇನೂ ಅವ್ಳನ್ನು ಹೊಡೆದು ಬಡಿದು ಮಾಡಿದೆ.. ಮನುಷ್ಯನೋ, ಮೃಗನೋ ನೀನು..?'

'ಹೌದು.. ನಾನು ಮೃಗನೇ.. ಅದನ್ನು ಕೇಳೋಕೆ ನೀನ್ಯಾರು?.. ನನ್ನ ವಿಷ್ಯದಲ್ಲಿ ತಲೆ ಹಾಕಲು ಇವ್ರು ಯಾರು? ನಿಮಗ್ಯಾಕೆ ಬೇಡದ ಉಸಾಬರಿ.. ನಿಮ್ಮೆಲ್ಲರ ಗೊಡವೇನೇ ಬೇಡ ಅಂತ ದೂರ ಹೋಗ್ತಿದ್ರೆ.. ಅಲ್ಲೂ ಇನ್ಸ್‌ಪೆಕ್ಟರ್‌ನ ಕರ್ಕೊಂಡು ಬಂದು ನನ್ನನ್ನ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದೀರಾ..?' ಸಿಟ್ಟಿನಿಂದ ಅರಚಿದ.

'ನಾವು ಬಂದಿರೋದು ನಿಮ್ಮನ್ನ ಇಕ್ಕಟ್ಟಿಗೆ ಸಿಲುಕಿಸಲು ಅಲ್ಲ ಸೂರ್ಯ.. ನಿಮ್ಮನ್ನು ನಮ್ಮ ಮನೆಗೆ ಕರೆದೊಯ್ಯಲು.. ಇನ್ನು ನೀವೆಲ್ಲೂ ಇರಬೇಕಾದ ಅಗತ್ಯವಿಲ್ಲ.... ನೀವಿನ್ನು ನಿಮ್ಮ ಮನೆಯಲ್ಲೇ ಇರಬಹುದು..' ಅಪೂರ್ವ ನಿಧಾನವಾಗಿ ನುಡಿದಾಗ ಅವಳ ಮಾತಿನರ್ಥವಾಗದವನಂತೆ ಸೂರ್ಯ ಕಣ್ಣು ಕಿರಿದುಗೊಳಿಸಿ ಪ್ರಶ್ನಾರ್ಥಕವಾಗಿ ದಿಟ್ಟಿಸಿದ.

'ನಿಮ್ತಂದೆ ನಿಮ್ಮನ್ನು ಆ ಮನೆಯಲ್ಲೇ, ಅವರೊಂದಿಗೆ ಇರಲು ಮನಸಾರೆ ಒಪ್ಪಿದ್ದಾರೆ.. ಅಮ್ಮನೂ ನಿಮ್ಮ ಆಗಮನದ ಖುಷೀಲಿ ಸಂಭ್ರಮಿಸ್ತಾ ಇದ್ದಾರೆ. ನೀವು ಬಯಸ್ತಾ ಇದ್ದ ಪ್ರೀತಿ ನಿಮಗೆ ಸಿಕ್ತಾ ಇದೆ.. ಅದಕೋಸ್ಕರ ನಿಮ್ಮನ್ನು ಹುಡುಕಿ ಅವ್ರ ಹತ್ರ ಕರ್ಕೊಂಡು ಹೋಗ್ತಾ ಇರೋದು..' ಅಪೂರ್ವ

## ಮಾತು

ಮಾತನಾಡದ
ಹುಡುಗಿಯರ
ಮೈಮೇಲೆ
ಇರುತ್ತವೆ
ಮಾತನಾಡೋ
'ಟೀ ಶರ್ಟ್'ಗಳು!

★ ನರಸಿಂಹ ಪೈ



ವಿಜಯ